# ಆಹಾ ಸುದ್ದಿ!

★ ಸಸಿತೋಟ



ಅಮೆರಿಕಾದ ಈ ಗೋಲ್ಡನ್ ರಿಟ್ರೀವರ್ ನಾಯಿಯ ಹೆಸರು ಸನ್‌ಡಾನ್ಸ್. ತನ್ನ ಮಾಲೀಕ ಮತ್ತು ಮಾಲೀಕನ ಪತ್ನಿ ಉಪಾಹಾರಗೃಹದಲ್ಲಿ ಹೊಟ್ಟೆ ಬಿರಿ ತಿನ್ನುತ್ತಿದ್ದರೆ, ಈ ಡಾಗ್ಗಿ ಕಾರಿನಲ್ಲಿ ಕುಳಿತು ನೂರು ಡಾಲರ್‌ನ ಐದು ನೋಟುಗಳನ್ನು ಉಪಾಹಾರವಾಗಿ ಸ್ವೀಕರಿಸಿತು. ಮಾಲೀಕ ಕ್ಲಿಂಕೆಲ್ ಮರುದಿನ ನಾಯಿಯ ಟಾಯ್ಲೆಟ್ ಸ್ವಚ್ಛ ಮಾಡಿ ಸಿಕ್ಕಿದ ಡಾಲರ್ ಚೂರುಗಳನ್ನು ಅಂಟಿಸಿ ಅಮೆರಿಕಾದ ಟ್ರೆಸರಿಗೆ ಕಳಿಸಿದ್ದನಂತೆ. ಟ್ರೆಸರಿಯಿಂದ ಬಂದ 500 ಡಾಲರ್‌ನ ಚೆಕ್ ಸನ್‌ಡಾನ್ಸ್‌ಗೆ ರುಚಿಸಿಲ್ಲವೆಂದು ಕಾಣುತ್ತದೆ!

ಇಂಗ್ಲೆಂಡ್‌ನ ಲಿವರ್‌ಪೂಲ್‌ನ ನೀಲ್ ಮದುವೆ ದಿನ ಹಾಲ್ ಬುಕ್ ಮಾಡಲು ಮರೆತಿದ್ದ. ಅದನ್ನು ಭಾವಿ ಪತ್ನಿಯಿಂದ ಮರೆಮಾಚಲು ಪೊಲೀಸರಿಗೆ ಆ ಹಾಲ್‌ನಲ್ಲಿ ಬಾಂಬ್ ಇದೆ ಎಂದು ಹುಸಿ ಕರೆ ಮಾಡಿದ. ಈ ತಪ್ಪನ್ನು ಭಾವಿ ಪತ್ನಿಯೇನೋ ಕ್ಷಮಿಸಿದಳು, ಆದರೆ ಕೋರ್ಟ್ ನೀಲ್‌ಗೆ ಜೈಲಿನ ಹಾದಿ ತೋರಿಸಿದೆ. ಈಗ ಎಲ್ಲಾ ಸಲೀಸು, ಬುಕಿಂಗ್ ಇಲ್ಲದೇ ಜೈಲಿನ ಹಾಲ್‌ನಲ್ಲೇ ಮದುವೆ ಮಾಡಿಕೊಳ್ಳಬಹುದು.



ಈತ ಲಂಡನ್ನಿನಲ್ಲಿ ಯಾರೋ ನಿಲ್ಲಿಸಿದ್ದ ಕಾರಿನಿಂದ ಕಳವು ಮಾಡಿದ ಖದೀಮ. ಕದ್ದೇ ಇಲ್ಲ ಎಂದು ವಾದಿಸಿದರೂ ಕಾರೇ ಸಾಕ್ಷಿ ಹೇಳಿಬಿಟ್ಟಿದೆ. ಕದಿಯುವಾಗ ಕಾರು ಈತನ ಮೇಲೆ 'ಸ್ಮಾರ್ಟ್ ವಾಟರ್' ಎರಚಿತ್ತಂತೆ. ಅತಿ ನೇರಳೆ ಕಿರಣ ಬಳಸಿ ತೆಗೆದ ಫೋಟೋದಿಂದ ಸಾಬೀತಾಗಿಬಿಟ್ಟಿದೆ. ಪಾಪ, ಕಾರು ಎಂದು ಬಿಟ್ಟು ಹೋಗಿದ್ದ ಕಳ್ಳ, ಕಾರನ್ನೇ ಕದಿಯಬೇಕಿತ್ತು ಎಂದು ಈಗ ಹಳಹಳಿಸುತ್ತಿರಬಹುದು!

ಇಂಡೋನೇಷ್ಯಾದ ಬೀದಿ ಬೀದಿಗಳಲ್ಲಿ ನಾಗರಹಾವಿನ ರಕ್ತದ ಮಾರಾಟ ಬಹಳ ಜೋರಿನಿಂದ ನಡೆಯುತ್ತದಂತೆ. ಗಿರಾಕಿಗಳೆಲ್ಲಾ ಪುರುಷರೇ. ರಕ್ತ ಕುಡಿದರೆ ಹಾಸಿಗೆಯಲ್ಲಿ ಹಾವಿನಷ್ಟೇ ಕೆಚ್ಚು ಬರುತ್ತದೆ ಎಂಬ ಪ್ರಚಾರ ಜೋರಂತೆ. ಜೊತೆಗೆ ನೆಂಚಿಕೊಳ್ಳಲು ಪ್ರಾಣಿಗಳ ವೃಷಣಗಳು. ಯುದ್ಧಕ್ಕೆ ಹೋಗುವವರೂ ಇಷ್ಟೊಂದು ತಯಾರಿ ಮಾಡಿಕೊಳ್ಳುವುದು ಅನುಮಾನ.



ಅಮೆರಿಕಾದ ಓಕ್ಲಾಹಾಮಾದ ಮನೆಯೊಂದರಲ್ಲಿ ಕಳವು ಮಾಡಿದ ವಿಲಿಯಮ್ಸ್ ಒಂದು ವಸ್ತುವನ್ನು ಬಿಟ್ಟು ಎಲ್ಲವನ್ನೂ ಕದ್ದೊಯ್ದ. ಆ ಬಿಟ್ಟುಹೋದ ವಸ್ತುವಿನಿಂದಲೇ ಪೊಲೀಸರು ಕಳ್ಳನನ್ನು ಪತ್ತೆ ಮಾಡಿದರಂತೆ. ಆ ಬಿಟ್ಟುಹೋದ ವಸ್ತು ಶೌಚಾಲಯದಲ್ಲಿ ಮಾಡಿದ ಮಲ ವಿಸರ್ಜನೆ. ನೀರು ಫ್ಲಶ್ ಮಾಡದೇ, ಬಳಸಿದ ಟಾಯ್ಲೆಟ್ ಪೇಪರ್ ಅಲ್ಲೇ ಬಿಸಾಕಿ ಹೋದ ವಿಲಿಯಮ್ಸ್ ಡಿಎನ್‌ಎ ಪರೀಕ್ಷೆಯಲ್ಲಿ ಸಿಕ್ಕಿಬಿದ್ದನಂತೆ. ಬೇರೆ ಕಳ್ಳರು ಅದನ್ನೂ ಜೊತೆಗೇ ಒಯ್ಯಬಹುದೇನೋ!

ಹವಾನಾದ 68-ಎ ಸ್ಟ್ರೀಟ್‌ನಲ್ಲಿ ಸಾಗಿದರೆ ವ್ಯಕ್ತಿಗಳು ಡಬಲ್ ಡಬಲ್ ಕಂಡು ಕಣ್ಣಿನ ಟ್ರಬಲ್ ಎಂದು ಕಕ್ಕಾಬಿಕ್ಕಿಯಾಗುವುದು ಖಂಡಿತ. ಇದೊಂದೇ ಬೀದಿಯಲ್ಲಿ 12 ಜೊತೆ ಅವಳಿಗಳು ಇದ್ದಾರಂತೆ. ಯಾಕೆಂದು ಅಧ್ಯಯನ ಇದುವರೆಗೂ ನಡೆದಿಲ್ಲ. ಆದರೆ ಬೀದಿಯ ನಿವಾಸಿಯೊಬ್ಬರ ಮನೆಯಲ್ಲಿರುವ 'ಮಾತಾ ಸಿಗ್ವರಯ' ಮರದ ವರದಾನ ಎನ್ನುತ್ತಾರಂತೆ ಅಲ್ಲಿಯವರು. ಒಂದು ಕೇಳಿದರೆ ಎರಡು ಕೊಟ್ಟಿದೆ ಈ ಮರ ಮಾತೆ. 'ಊಪರ್‌ವಾಲಾ ಜಬ್ ಭಿ ದೇತಾ, ಪೂರಾ ಛಪ್ಪರ್ ಫಾಡ್ ಕೆ ದೇತಾ' ಅಲ್ಲವೇ?

